ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿಸಿ. ಸಂಖ್ಯೆ: 69/2024**

ಪ್ರ.ವ.ಬೋ.ತಾಃ 24-07-2025

ಚಾಸಾಃ 3 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಸಿದ್ದಪ್ಪ |
| ತಂದೆ/ಗಂಡನ ಹೆಸರು | ಮುದ್ದಣ್ಣ |
| ವಯಸ್ಸು | 45 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಲಕ್ಕಿಹಟ್ಟಿ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ 1, 2, 4 ರಿಂದ 6 ರವರು ಗೊತ್ತು. ಮೃತ ನಿಜಲಿಂಗಪ್ಪರವರು ಸಹ ಗೊತ್ತು. ನಾನು ಆರೋಪಿಯನ್ನು ನೋಡಿರುವುದಿಲ್ಲ. ದಿ.18.07.2024 ರಂದು ನಿಜಲಿಂಗಪ್ಪನವರು ಹೀರೊಹೊಂಡ ಬೈಕ್‌ನ ಮೂಲಕ ಜೋಳ ತರಲು ಮಧಗಿರಿಗೆ ಹೋಗುತ್ತಿರುವಾಗ ಹೊಸಕೆರೆಯ ಹತ್ತಿರ ಮಧುಗಿರಿಯಿಂದ ಪಾವಗಡದ ಕಡೆಗೆ ಬರುತಿದ್ದ ಬಲೇರೋ ವಾಹನ ನಿಜಲಿಂಗಪ್ಪನವರ ಬೈಕ್‌ಗೆ ಡಿಕ್ಕಿ ಪಡಿಸಿತು ತಕ್ಷಣ ನಾನು ಮತ್ತು ಚಾಸಾ 2 ರವರು ಆತನನ್ನು ಮಧಗಿರಿ ಆಸ್ಪತ್ರೆಗೆ ಕರೆದುಕೊಂಡು ಬಂದವು. ಆದರೆ ಆತ ಮೃತಪಟ್ಟಿರುತ್ತಾರೆಂದು ವೈದ್ಯರು ತಿಳಿಸಿದ್ದರು. ಈ ವಿಚಾರವನ್ನು ನಾವು ಫೋನ್ ಮೂಲಕ

ಚಾಸಾ1 ರವರಿಗೆ ತಿಳಿಸಿದೆವು. ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿರುತ್ತೇನೆ ಅದನ್ನು ನಿಪಿ.11 ಎಂದು ಸಾಕ್ಷಿ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಈಗ ತೋರುತ್ತಿರುವ ಪೋಟೋದಲ್ಲಿರುವ ವ್ಯಕ್ತಿ ನಾನೇ ಆಗಿರುತ್ತೇನೆ ಆ 3 ಪೋಟೋಗಳನ್ನು ನಿಪಿ.12 ರಿಂದ 15 ಎಂದು ಗುರುತಿಸಲಾಯಿತು. ಅಪಘಾತವಾದ 3 ದಿನಗಳ ನಂತರ ಪೊಲೀಸರು ಘಟಾನ ಸ್ಥಳಕ್ಕೆ ಬಂದು ಸ್ಥಳ ಪಂಚನಾಮೆ ಮಾಡಿ ಸಹಿ ಪಡೆದರು. ಆ ಸಂದರ್ಭದಲ್ಲಿ ಚಾಸಾ 4 ಮತ್ತು 5 ರವರು ಸಹ ಆ ಸ್ಥಳದಲ್ಲಿದ್ದರು ಆಗ ಸಂಜೆ 06.45 ಗಂಟೆ ಆಗಿತ್ತು. ಅದೇ ರೀತಿ ಈಗ ತೋರುತ್ತಿರು ಅಮಾನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ ಅದನ್ನು ನಿಪಿ.15 ಎಂದು ಸಾಕ್ಷಿ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ದಿ.19.07.2024 ರಂದು ಪೊಲೀಸರು ಘಟಾನ ಸ್ಥ,ಳಕ್ಕೆ ಬೇಟಿ ನೀಡಿ ಮಧ್ಯಾಹ್ಣ 02 ರಿಂದ 03 ಗಂಟೆ ಸಮಯದಲ್ಲಿ ನನ್ನ ಚಾಸಾ 4 ಮತ್ತು 5 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿ. ಅದೇ ದಿನ ಸಂಜೆ 03.30 ರಿಂದ

04.30 ಗಂಟೆ ಸಮಯದಲ್ಲಿ ಅಪಘಾತ ಪಡಿಸಿದ ವಾಹನವನ್ನು ಜಪ್ತಿ ಮಾಡಿ ನನ್ನ ಹಾಗೂ ಚಾಸಾ 4 ಮತ್ತು 5 ರವರ ಸಮಕ್ಷಮ ಠಾಣಾ ಆವರಣದಲ್ಲಿ ಸಹಿ ಪಡೆದರು ಎಂದರೆ ಸರಿ. ಆ ಸಂದರ್ಭದಲ್ಲಿಯೇ ಆ ಪೋಟೋಗಳನ್ನು ತೆಗೆದರು ಎಂದರೆ ಸರಿ. ಆ ದಿನ ಆ ಬುಲೇರೋ ವಾಹನವನ್ನು ಮಂಜುನಥ ಎಂಬುವವರು ಚಲಾಯಿಸುತಿದ್ದರು ಎಂದರೆ ಸಾಕ್ಷಿಯು ಆ ಚಾಲಕನನ್ನು ನೋಡಿಲ್ಲ ಎಂದು ಸ್ವತಃ ನುಡಿಯತ್ತಾರೆ.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಜಿ.ಎಸ್.ಆರ್ ವಕೀಲರಿಂದಃ-**

ಅಪಘಾತವಾದ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿ. ಆ ಸ್ಥಳದಲ್ಲಿ ವಾಹನಗಳು ವೇಗವಾಗಿ ಚಲಾಯಿಸಿಕೊಂಡು ಬಂದರೆ ಮಗುಚಿ ಬೀಳು ಸಾಧ್ಯತೆ ಇದೆ ಎಂದರೆ ಸರಿ. ಅಪಘಾತವಾದ ಸ್ಥಳದಿಂದ ಬುಲೇರೋ ವಾಹನ 15 ಅಡಿ ದೂರದಲ್ಲಿ ನಿಂತಿತ್ತು. ಆ ಅಪಘಾತವು ವಿಡಿಗೇಶಿ ಕಡೆಯಿಂದ ಮಧಗಿರಿಗೆ ಬರುವ ರಸ್ತೆಯಲ್ಲಿ ಎಡಭಾಗದಲ್ಲಿ ಆಗಿತ್ತು. ಈ ಅಪಘಾತವನ್ನು ನಾನು ಸುಮಾರು 30 ಅಡಿ ದೂರಿದಿಂದ ನೋಡಿದೆವು. ಈ ಅಪಘಾತವನ್ನು ನಾನು ನೋಡಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತವು ಬಲೋರೋ ವಾಹನದಿಂದ ಚಾಲಕನ ಅತೀ ವೇಗ ಮತ್ತು ಅಜಾಗರುಕತೆಯಿಂದ ಆಗಿರುವುದಿಲ್ಲ, ಬದಲಾಗಿ ನಿಜಲಿಂಗಪ್ಪನ ಅತೀ ವೇಗ ಮತ್ತು ಅಜಾಗರುಕತೆ ಚಾಲನೆಯಿಂದ ಆಗಿರುತ್ತದೆ ಎಂದರ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಬಗ್ಗೆ ಸುಳ್ಳು ಹೇಳುತಿದ್ದೇನೆ ಎಂದರೆ

ಸರಿಯಲ್ಲ. ಆ ಮಹಜರ್ ಗೆ ನಾನು ಚಾಸಾ 4 ಮತ್ತು 5 ರವರು ಸಹಿ ಮಾಡಿರುತ್ತೇವೆ ಆದರೆ ಎಷ್ಟು ಜನ ಪೊಲೀಸರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಆ ಮಹಜರ್ ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಬರೆದಿರುವ ವಿಚಾರ ನಾನು ಓದಿರುವುದಿಲ್ಲ ಮತ್ತು ಯಾರು ನನಗೆ ಓದಿ ತಿಳಿಸಿರುವುದಿಲ್ಲ. ಆ ದಿನ ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಠಾಣೆಯಲ್ಲಿ ಸೃಷ್ಟಿಸಿ ಕೊಂಡಿದಾದರೆ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ಜಪ್ತಿ ಮಾಡಿಕೊಂಡಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಮೃತ ನಿಜಲಿಂಗಪ್ಪನವರು ನಮ್ಮ ಊರಿನವರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

Sd/-
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ